ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 16.12.2025.

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಕೆ ವೈ ಎನ್ ವಕೀಲರಿಂದಃ

ನಾನು ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿ-1 ಮತ್ತು 2 ರವರಿಗೆ ಮತ್ತು ಅವರ ಮೇಲಾಧಿಕಾರಿಗಳಿಗೆ ಯಾವುದೇ ಮನವಿ ಸಲ್ಲಿಸಿರುವುದಿಲ್ಲ. ನಾನು ಪ್ರತಿವಾದಿ-1 ಮತ್ತು 2 ರವರಿಗೆ ಈ ದಾವೆ ಸಲ್ಲಿಸುವ ಪೂರ್ವದಲ್ಲಿ ನೋಟೀಸು ನೀಡಿರುವುದಿಲ್ಲ. ನಾನು ಈ ದಾವೆಯನ್ನು ನನ್ನ ಜಮೀನಿನಲ್ಲಿ ರಸ್ತೆ ಮಾಡಲು ಪ್ರತಿವಾದಿಗಳು ಪ್ರಯತ್ನಿಸಿದ್ದರಿಂದ ಸಲ್ಲಿಸಿದ್ದೇನೆ. ನಾನು ವಾದ ಪತ್ರದಲ್ಲಿ ಪ್ರತಿವಾದಿಗಳು ರಸ್ತೆ ಮಾಡಲು ಪ್ರಯತ್ನಿಸಿದ ವಿಚಾರವನ್ನು ಹೇಳಿದ್ದೇನೆ. ದಾವಾ ಸ್ವತ್ತಿನಲ್ಲಿ ಸುಮಾರು 150 ಅಡಿಗಳ ಉದ್ದದ ರಸ್ತೆ ಮಾಡಲು ಪ್ರತಿವಾದಿಗಳು ಪ್ರಯತ್ನಿಸಿದ್ದರು. ಪ್ರತಿವಾದಿಗಳು ಸುಮಾರು 500 ಅಡಿ ಉದ್ದದ ರಸ್ತೆ ಮಾಡಲು ಪ್ರಯತ್ನಿಸಿದ್ದಾರೆ. ಪ್ರತಿವಾದಿಗಳು ರಸ್ತೆಯನ್ನು ಚಿಂತಾಮಣಿ ರಸ್ತೆಯಿಂದ ಶಿಡ್ಲಘಟ್ಟ ಬಸ್ ನಿಲ್ದಾಣದ ಪಕ್ಕ ಇರುವ ಮಸೀದಿವರೆಗೆ ರಸ್ತೆ ಮಾಡಲು ಪ್ರಯತ್ನಿಸಿದ್ದರು. ನಾನು ಮೇಲೆ ಹೇಳಿದ ಚಿಂತಾಮಣಿ ರಸ್ತೆಯು ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆಯ ಪೂರ್ವ ದಿಕ್ಕಿಗೆ ಗೌಡನ ಕೆರೆ ಇದೆ ಎಂದರೆ ಸರಿ. ಸದರಿ ಚಿಂತಾಮಣಿ ರಸ್ತೆ ಬೈ ಪಾಸ್ ರಸ್ತೆ ಎಂದರೆ ಸರಿ. ಸದರಿ ಬೈ ಪಾಸ್ ರಸ್ತೆಯ ಪಶ್ಚಿಮದ ಕಡೆಗೆ ರಾಜ ಕಾಲುವೆ ಬರುತ್ತದೆಂದರೆ ಸರಿಯಲ್ಲ. ಸದರಿ ರಸ್ತೆಯ ಪಶ್ಚಿಮಕ್ಕೆ ಉಳಿದ ಜಾಗ ರಾಜ ಕಾಲುವೆ ಆಗಿ ಉಳಿದಿದೆ ಎಂದರೆ ಸರಿಯಲ್ಲ. ಬೈ ಪಾಸ್ ರಸ್ತೆಯ ಪಶ್ಚಿಮಕ್ಕೆ ಜಾಗದ ಕಾಲುವೆ ಮುಖಾಂತರ ನೀರು ಹರಿದು, ಬಸ್ ಸ್ಟಾಂಡ್ ಪಕ್ಕ ಇರುವ ಮೋರಿ ಬಳಿ ಕೋಡಿ ಹರಿಯುತ್ತದೆಂದರೆ ಸರಿ. ಸದರಿ ಮೋರಿಯಿಂದ ಹೋಗುವ ನೀರು ಅಮ್ಮನ ಕೆರೆಗೆ ಹೋಗಿ ತಲುಪುತ್ತದೆಂದರೆ ಸರಿ.

2. ಪ್ರತಿವಾದಿಗಳು ರಸ್ತೆಯನ್ನು ಮಾಡಲು ಪ್ರಯತ್ನಿಸಿದ್ದರು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಸ.ನಂ.257 ರ ದಕ್ಷಿಣ ದಿಕ್ಕಿಗೆ ರಾಜ ಕಾಲುವೆ ಇದೆ ಎಂದರೆ ಸರಿಯಲ್ಲ. ಕೆರೆ ಇರುತ್ತದೆ. ಚಿಂತಾಮಣಿ ಬೈ ಪಾಸ್ ರಸ್ತೆಯ ಪಶ್ಚಿಮ ದಿಕ್ಕಿನ ರಾಜ ಕಾಲುವೆಯ ಜಾಗದ ಉತ್ತರ ದಿಕ್ಕಿಗೆ ಸಾರ್ವಜನಿಕ ಉದ್ಯಾನವನ ಇದೆ ಎಂದರೆ ಸರಿಯಲ್ಲ. ಸದರಿ ಉದ್ಯಾನವನ ತ್ರಿಭುಜ ಆಕಾರದಲ್ಲಿ ಇದ್ದು ಅದಕ್ಕೆ ನೈಋತ್ಯ ಮೂಲೆ ಇರುವುದಿಲ್ಲ ಎಂದರೆ ಸರಿ. ಸದರಿ ಉದ್ಯಾನವನದ ವಾಯುವ್ಯ ದಿಕ್ಕಿನ ಮೂಲೆಯಲ್ಲಿ ನನ್ನ ಜಮೀನು ಬರುತ್ತದೆಂದರೆ ಸರಿ. ಪ್ರತಿವಾದಿಗಳು ಸಾರ್ವಜನಿಕರ ಉಪಯೋಗಕ್ಕೆ ಉದ್ಯಾನವನ ಮಾಡಿದ್ದು, ನಾನು ಹೇಳುವಂತೆ ರಸ್ತೆ ಮಾಡಲು ಪ್ರಯತ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ಉದ್ಯಾನವನದ ಒಳಗಡೆ ಸಾರ್ವಜನಿಕರು ತಿರುಗಾಡಲು ಮತ್ತು ವಾಯು ವಿಹಾರ ಮಾಡಲು ಅನುಕೂಲವಾಗುವಂತೆ ರಸ್ತೆಯನ್ನು

ಮಾಡಲಾಗಿದ್ದು , ನಾನು ಹೇಳುವಂತೆ ನನ್ನ ಜಮೀನಿನಲ್ಲಿ ಯಾವುದೇ ರಸ್ತೆಯನ್ನು ಮಾಡಲು ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ.

3. ಪ್ರತಿವಾದಿಗಳು ಉದ್ಯಾನವನ ಮಾಡುವ ಕಾಲಕ್ಕೆ ಭೂಮಾಪಕರು ಬಂದು ಅಳತೆ ಮಾಡಿರುತ್ತಾರೆಂದರೆ ಸರಿಯಲ್ಲ.

ಈ ಹಂತದಲ್ಲಿ ವಾದಿ ತಮ್ಮ ಪರವಾಗಿ ದಾಖಲೆಗಳನ್ನು ಗುರುತಿಸಿಕೊಳ್ಳದೇ ಇರುವುದರಿಂದ ಮತ್ತು **1** ನೇ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಪಾಟಿ ಸವಾಲು ಮುಂದೂಡಲಾಯಿತು.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.